ಸಾಕ್ಷಿಯನ್ನು ಮದ್ಯಾಹ್ನ 3.00 ಗಂಟೆಗೆ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 23.06.2023.

**<u>ಪಾಟೀ ಸವಾಲುಃ</u>** <u>ಪ್ರತಿವಾದಿ ಪರ ಶ್ರೀ. ಬಿ.ಎ.ಡಿ. ವಕೀಲರಿಂದಃ</u>

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 23.06.2023.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಎ.ಡಿ. ವಕೀಲರಿಂದಃ**

1. ನಾನು ನನ್ನ ಮುಖ್ಯ ವಿಚಾರಣೆಯ ಹಾಕುವ ಕಾಲಕ್ಕೆ ಮ್ಯಾನೆಜರ ಆಗಿ ವಾದಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ದಿಃ 22.06.2020 ಕ್ಕೆ ಹಾಜರಾಗಿ ದಿಃ 15.05.2023 ರಂದು ವಾದಿ ಬ್ಯಾಂಕಿನಿಂದ ವರ್ಗಾವಣೆಗೊಂಡು ಉಡುಪಿ ಪ್ರಾದೇಶಿಕ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ವಾದಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲಾ ಎಂದರೆ ಸರಿ, ಆದರೆ ವರ್ಗಾವಣೆ ಆದೇಶ ಕೊಡಬೇಕಾಗಿತ್ತು ಎಂದು ನುಡಿಯುತ್ತಾರೆ. 2013 ರಲ್ಲಿ ಪ್ರತಿವಾದಿಯರ ವಿರುದ್ಧ ನಮ್ಮ ಹಿಂದಿನ ಮ್ಯಾನೇಜರ್ ದಾವೆಯಲ್ಲಿ ಹಾಕಿದ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ.

2. 2 ನೇ ಪ್ರತಿವಾದಿ ಜೀವಂತ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲಾ. 4 ಮತ್ತು 5 ನೇ ಪ್ರತಿವಾದಿಯವರ ವಯಸ್ನ್ನು ದಾವೆಯ ವಾದ ಪತ್ರದ ಸಿರೋನಾಮೆಯಲ್ಲಿ ನಿಖವಾಗಿ ತೋರಿಸಿಲ್ಲಾ ಎಂದರೆ ಸರಿ. ಆದ್ದರಿಂದ ಸದರಿ 4 ಮತ್ತು 5 ನೇ ಪ್ರತಿವಾದಿ ಈ ಸದ್ಯ ವಯಸ್ಕರು ಆಗಿರುತ್ತಾರೋ ಇಲ್ಲೋ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ವಯಸ್ಕರು ಆಗಿರಬಹುದು ಎಂದು ನುಡಿಯುತ್ತಾರೆ. ಸದ್ಯ 4 ಮತ್ತು 5 ನೇ ಪ್ರತಿವಾದಿಯವರು ವಯಸ್ಕರು ಆಗಿರುವ ಕಾರಣ ಅವರ ಪಾಲನಾ ಕರ್ತರನ್ನು ತೆಗೆದುಹಾಕಲು ನಮ್ಮ ವಕೀಲರ ಮುಖಾಂತರ ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲಾ ಎಂದರೆ ಸರಿ. ಈ ದಾವೆ ಸಲ್ಲಿಸಿದ ನಂತರ 6 ರಿಂದ 10 ನೇ ಪ್ರತಿವಾದಿ ರವರಿಂದ ನಮ್ಮ ಬ್ಯಾಂಕಿಗೆ ಯಾವುದೇ ಹಣ ಬಂದಿರುವುದಿಲ್ಲ.

3. ದುರುಉಪಯೋಗಪಡಿಸಿಕೊಂಡ ಹಣಕ್ಕೆ ಸಂಬಂಧಪಟ್ಟಂತೆ ನಾವು ನಮ್ಮ ಬ್ಯಾಂಕಿನಲ್ಲಿ ಒಂದು ಖಾತೆಯನ್ನು ಇಟ್ಟಿದ್ದ, ಸದರಿ ಖಾತೆಗೆ ಯಾವುದೇ ಹಣ ಯಾರಿಂದಲೂ ಬಂದಿರುವ ಬಗ್ಗೆ ಎಂಟ್ರಿ ಇರುವುದಿಲ್ಲ. ಈ ದಾವೆ ಮಾಡುವುಕ್ಕಿಂತ ಮುಂಚೆ 13 ನೇ ಪ್ರತಿವಾದಿಯವರಿಗೆ ನಮ್ಮ ಬ್ಯಾಂಕಿನಿಂದ ಯಾವುದೇ ಬೇಡಿಕೆ ನೋಟೀಸ್‌ನ್ನು ಕಳುಹಿಸಿರುವುದಿಲ್ಲ ಹಾಗೂ ಅದು ಮುಟ್ಟಿದ ಬಗ್ಗೆ ನಾವು ಯಾವುದೇ ದಾಖಲೆ ಹಾಜರುಪಡಿಸಿಲ್ಲಾ ಎಂದರೆ ಸರಿ. ಈ ಪ್ರಕರಣದಲ್ಲಿ 13 ನೇ ಪ್ರತಿವಾದಿ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾನೆ ಎಂಬುವುದರ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮದ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**